# ಕರ್ನಾಟಕ ಸರಕಾರದ ನಡುವಳಿಕೆಗಳು

ವಿಷಯ:- ಸಿಂದಗಿ ತಾಲೂಕಿನ ಜಾಲವಾದ ಗ್ರಾಮದ ಜಮೀನುಗಳನ್ನು ಚಿಮ್ಮಲಗಿ ಏತ ನೀರಾವರಿ ಅಡಿಯಲ್ಲಿ ಬರುವ ಕೋರವಾರ ಶಾಖಾ ಮುಖ್ಯ ಕಾಲುವೆಯ ಕಿ.ಮೀ. 0.000 ರಿಂದ 0.600 ರ ವರೆಗಿನ ಕಾಲುವೆ ನಿರ್ಮಾಣಕ್ಕಾಗಿ ಜಮೀನುಗಳ ಮಾಲೀಕರಿಗೆ ಪುನರವಸತಿ ಮತ್ತು ಪುನರವ್ಯವಸ್ಥೆಯ ಕರಡು ಯಾದಿಯನ್ನು ಅನುಮೋದಿಸುವ ಕುರಿತು.

ಓದಲಾಗಿದೆ: 1} ಭೂಸ್ವಾಧೀನ ಕಾಯ್ದೆ 2013ರ ಕಲಂ 11(1) ಕ್ಕೆ ಅನುಸಾರವಾಗಿ ಹೊರಡಿಸಲಾಗಿರುವ ಅಧಿಸೂಚನೆ ದಿ: 22-08-2016

2} ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ನ್ಯಾಯೋಚಿತ ಪರಿಹಾರಕ್ಕೆ ಹಕ್ಕು, ಪುನರ್‌ವಸತಿ ಮತ್ತು ಪುನರ್ ವ್ಯವಸ್ಥೆ ಅಧಿನಿಯಮ, 2013ರ ಕಲಂ 16(6)ರ ಕುರಿತು.

3} ಈ ಕಾರ್ಯಾಲಯದ ಪತ್ರ ಕ್ರ. 3844 ದಿನಾಂಕ 07-11-2016.

4} ಪುನರ್‌ವಸತಿ ಅಧಿಕಾರಿ, ಕೃ.ಮೇ.ಯೋ. ಆಲಮಟ್ಟಿ ಇವರ ಪತ್ರ ಕ್ರ. 787 ದಿನಾಂಕ: 19-11-2016.

5} ಮಹಾ ವ್ಯವಸ್ಥಾಪಕರು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ, ಕೃ.ಮೇ.ಯೋ. ನವನಗರ, ಬಾಗಲಕೋಟ ಇವರ ಕಲಂ 17(2)ರಡಿ ಶಿಫಾರಸ್ಸು ದಿನಾಂಕ: 8-12-2016.

-000-

ಸಂ: ಮವ್ಯ/ಪುಪು/ಸಿಆರ್-99/2016-17/1410 ದಿನಾಂಕ: 09-12-2016.

ಪುನರ್ವಸತಿ ಅಧಿಕಾರಿ, ಕೃಮೇಯೋ, ಆಲಮಟ್ಟಿರವರಿಂದ ಬಂದಿರುವ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ ಸಾರ್ವಜನಿಕ ಉದ್ದೇಶಕ್ಕಾಗಿ ಸಿಂದಗಿ ತಾಲೂಕಿನ ಜಾಲವಾದ ಗ್ರಾಮದ ಜಮೀನುಗಳನ್ನು ಚಿಮ್ಮಲಗಿ ಏತ ನೀರಾವರಿ ಅಡಿಯಲ್ಲಿ ಬರುವ ಕೋರವಾರ ಶಾಖಾ ಮುಖ್ಯ ಕಾಲುವೆಯ ಕಿ.ಮೀ. 0.000 ರಿಂದ 0.600 ರ ವರೆಗಿನ ಕಾಲುವೆ ನಿರ್ಮಾಣಕ್ಕಾಗಿ ಜಮೀನು ಸ್ವಾಧೀನ ಪಡಿಸುತ್ತಿರುವ ಪ್ರಕರಣಗಳಿಗೆ ಒಟ್ಟು 08ಎ26ಗುಂ. ಕ್ಷೇತ್ರದ ನೂತನ ಕಾಯ್ದೆಯ ಕಲಂ 16(2) ನೇದ್ದರ ಮೇರೆಗೆ ಗಣತಿ ಕಾರ್ಯವನ್ನು ಕೈಗೊಂಡು ಪುನರ್‌ವಸತಿ ಮತ್ತು ಪುನರ್‌ವ್ಯವಸ್ಥೆ ಯೋಜನೆಯ ಯಾದಿಯನ್ನು ತಯಾರಿಸಿದ್ದಾರೆ.

ವಿಶೇಷ ಭೂಸ್ವಾಧೀನಾಧಿಕಾರಿ, ಕೃಮೇಯೋ, ಇಂಡಿ ಇವರನ್ನು ಈ ಯೋಜನೆಗೆ ಕಾರ್ಯವನ್ನು ನಿರ್ವಹಿಸಲು ನೇಮಿಸಲಾಗಿದೆ ಮತ್ತು ಸ್ವತ್ತುಗಳನ್ನು ಭೂಸ್ವಾಧೀನಪಡಿಸಿಕೊಳ್ಳಲು ಆದೇಶಿಸುವ ಅಧಿಕಾರವನ್ನು ನೀಡಲಾಗಿದೆ.

ಪ್ರಕರಣ ಅಸ್ತಿತ್ವದಲ್ಲಿರುವ ಸಂದರ್ಭಗಳು ನ್ಯಾಯಯುತ ಅಭಿಪ್ರಾಯ ಹೊಂದಿರುವುದರಿಂದ ಉಲ್ಲೇಖ (3)ರಡಿ ಕಾಯ್ದೆ ಕಲಂ 19(7)ರಡಿ ಅಂತಿಮ ಅಧಿಸೂಚನೆ ಕಾಲಾವಧಿಯನ್ನು ವಿಸ್ತರಿಸಲಾಗಿದೆ

ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ನ್ಯಾಯೋಚಿತ ಪರಿಹಾರಕ್ಕೆ ಹಕ್ಕು, ಪುನರ್‌ವಸತಿ ಮತ್ತು ಪುನರ್ ವ್ಯವಸ್ಥೆ ಅಧಿನಿಯಮ, 2013ರ ಕಲಂ 16(6)ರ ಅನುಗುಣವಾಗಿ ಸಲ್ಲಿಸಿದ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದ್ದು ಹಾಗೂ ಭೂಸ್ವಾಧೀನ ಕಾಯ್ದೆ 2013ರ ಕಲಂ 45 ರಡಿ ಪ್ರಕರಣದಲ್ಲಿ ಸದರಿ ಭೂಸ್ವಾಧೀನ ಪ್ರಕರಣದಲ್ಲಿ ಒಳಗೊಂಡ ಕ್ಷೇತ್ರವು 100 ಎಕರೆಗಿಂತ ಕಡಿಮೆ ಇರುವುದರಿಂದ ಅನ್ವಯಿಸುವುದಿಲ್ಲ.

ನೂತನ ಭೂಸ್ವಾಧೀನ ಪುನರ್‌ವಸತಿ ಮತ್ತು ಪುನರ್‌ವ್ಯವಸ್ಥೆ ಕಾಯ್ದೆ 2013ರ ಕಲಂ 16(3)ರಡಿ ತಯಾರಿಸಲಾದ ಗಣತಿ ಯಾದಿಯಲ್ಲಿ ಒಟ್ಟು ಕ್ಷೇತ್ರ 08ಎ26ಗುಂಟೆ ಕ್ಷೇತ್ರದಲ್ಲಿ ಜಮೀನು ಸ್ವಾಧೀನಕ್ಕೆ ಒಳಪಡುತ್ತಿದ್ದು, ಈ ಪೈಕಿ ಒಟ್ಟು 28 ಕುಟುಂಬಗಳು ಬಾಧಿತಗೊಳ್ಳುತ್ತಿದ್ದು, ಈ ಪೈಕಿ ಯಾವುದೇ ಕುಟುಂಬವು ಯೋಜನೆಗೆ ಒಟ್ಟು ಹೊಂದಿದ ಕ್ಷೇತ್ರಕ್ಕೆ ಬಹುಪಾಲು ಭೂಮಿಯನ್ನು ಕಳೆದು

ಕೊಳ್ಳುತ್ತಿರುವುದಿಲ್ಲ, ಅವರಿಗೆ ಜೀವನೋಪಾಯ ನಷ್ಟತೆ ಹೊಂದುತ್ತಿರುವುದಿಲ್ಲವೆಂದು ಪುನರ್ವಸತಿ ಅಧಿಕಾರಿಗಳು, ಕೃಮೇಯೋ, ಆಲಮಟ್ಟಿರವರು ತಯಾರಿಸಿ ಸಲ್ಲಿಸಿದ್ದಾರೆ.

ಪುನರ್ವಸತಿ ಅಧಿಕಾರಿ, ಕೃಮೇಯೋ, ಅಲಮಟ್ಟಿರವರು ಶಿಫಾರಸ್ಸು ಮಾಡಿರುವ ಯಾದಿಯನ್ನು ಆಧರಿಸಿ, ನೂತನ ಭೂಸ್ವಾಧೀನ ಕಾಯ್ದೆ 2013ರ ಕಲಂ 84 ರನ್ವಯ ಸೌಲಭ್ಯ ಪಡೆಯುವ ಕುಟುಂಬವು ಸುಳ್ಳು ಮಾಹಿತಿ ನೀಡಿದಲ್ಲಿ ಕಲಂ 84 (1) (2) ಹಾಗೂ (3) ರನ್ವಯ ಶಿಕ್ಷೆಗೆ ಗುರಿಪಡಿಸಲಾಗುವುದೆಂಬ ಷರತ್ತಿಗೆ ಒಳಪಟ್ಟು ಪುನರ್‌ವ್ಯವಸ್ಥೆ ಯೋಜನೆಯ ಪ್ರಸ್ತಾವನೆಯನ್ನು ನೂತನ ಕಾಯ್ದೆ ಕಲಂ 18ರಡಿ ಅನುಮೋದಿಸಲಾಗಿದೆ.

ಕಾಯ್ದೆ ಕಲಂ 41(6)ರಡಿ ಅನುಸೂಚಿತ ಪಂಗಡ ಹಾಗೂ ಬುಡಕಟ್ಟು ಜನಾಂಗಗಳಿಗೆ ಭೂಸ್ವಾಧೀನ ಪ್ರಕರಣಗಳು ಒಳಪಟ್ಟಿದ್ದಲ್ಲಿ ಸ್ವಾಧೀನದ ಸ್ವತ್ತುಗಳ ಶೇ. 1/3 ರಷ್ಟು ಪರಿಹಾರವನ್ನು ಸ್ವಾಧೀನ ಪೂರ್ವದಲ್ಲಿ ಬಾಧಿತ ಕುಟುಂಬಗಳಿಗೆ ಪಾವತಿಸುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

ಆಯುಕ್ತರು,
ಪುಪು ಮತ್ತು ಭೂಸ್ವಾಧೀನ, ಕೃಮೇಯೋ,
ಹಾಗೂ ಪದನಿಮಿತ್ತ ಸರಕಾರದ ಕಾರ್ಯದರ್ಶಿಗಳು,
ಕರ್ನಾಟಕ ಸರಕಾರ, ಕಂದಾಯ ಇಲಾಖೆ,
ನವನಗರ, ಬಾಗಲಕೋಟ.

***ಇವರಿಗೆ:***

1. ಜಿಲ್ಲಾಧಿಕಾರಿಗಳು ವಿಜಯಪುರ ಜಿಲ್ಲೆ ಇವರಿಗೆ ಮಾಹಿತಿ ಕುರಿತು ಕಳುಹಿಸಿದೆ.
2. ವಿಶೇಷ ಜಿಲ್ಲಾಧಿಕಾರಿಗಳು ಹಾಗೂ ಸಮೂಹ ವ್ಯವಸ್ಥಾಪಕರು, ಕೃಮೇಯೋ, ನವನಗರ, ಬಾಗಲಕೋಟರವರಿಗೆ ಮಾಹಿತಿ ಕುರಿತು ಕಳುಹಿಸಿದೆ.
3. ವಿಶೇಷ ಭೂಸ್ವಾಧೀನಾಧಿಕಾರಿ, ಕೃಮೇಯೋ, ಇಂಡಿ.
4. ಉಪ ವಿಭಾಗಾಧಿಕಾರಿಗಳು, ಇಂಡಿ ಇವರಿಗೆ ಮಾಹಿತಿಗಾಗಿ.
5. ಪುನರ್ವಸತಿ ಅಧಿಕಾರಿ, ಕೃಮೇಯೋ, ಅಲಮಟ್ಟಿ. ಇವರಿಗೆ ಅನುಮೋದಿತ ಪ್ರಸ್ತಾವನೆಯೊಂದಿಗೆ ಸೂಕ್ತ ಕ್ರಮಕ್ಕಾಗಿ
6. ತಹಶೀಲ್ದಾರರು ಸಿಂದಗಿ ಇವರ ಮಾಹಿತಿಗಾಗಿ.
7. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಜಾಲವಾದ ತಾಲೂಕ ಸಿಂದಗಿ ಇವರಿಗೆ.
8. Web site: www.bagalkot.nic.in/ukp. ಅಂತರಜಾಲದಲ್ಲಿ ಅಳವಡಿಸಲು ಸಿಸ್ಟಂ ಮ್ಯಾನೇಜರ್, ಕಂಪ್ಯೂಟರ್ ವಿಭಾಗ, ಪು ಮತ್ತು ಪು, ಕೃಮೇಯೋ, ನವನಗರ, ಬಾಗಲಕೋಟ ಇವರಿಗೆ.
9. ಭೂಸ್ವಾಧೀನ ಶಾಖೆಗೆ